ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

ಸಿ.ಸಿ. ಸಂಖ್ಯೆ: **502/2024**

ಪಿರ್ಯಾದಿ : ಕೆ.ವಿ. ಬಾಲನ್,
ವಯಸ್ಸು ಸುಮಾರು 60 ವರ್ಷ,
ಬಿನ್ ವೇಲಾಯುಧನ್,
ಟ್ರೇಡರ್, ದೀಪಾ ಫ್ರಾವಿಜನ್ ಸ್ಟೋರ್,
ವಾಸಃ ಬೀಜುವಳ್ಳಿ ಗ್ರಾಮ, ಹಳಸೆ ಅಂಚೆ,
ಮೂಡಿಗೆರೆ ತಾಲ್ಲೂಕು,
ಚಿಕ್ಕಮಗಳುೂರು ಜಿಲ್ಲೆ.

ವಿರುದ್ಧ

ಆರೋಪಿ : ಶ್ರೀ ಹೆಚ್.ಎಂ. ದೀಪಕ್, ವಯಸ್ಸು 45 ವರ್ಷ,
ಬಿನ್ ಮುದ್ದುಸ್ವಾಮಿ,
ವಾಸಃ ಹಾಲೂರು, ಜೋಗಣ್ಣಕೆರೆ ಅಂಚೆ,
ಮೂಡಿಗೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

ಆಪಾದನೆಯ ಸಾರಾಂಶ

ಶ್ರೀ ವಿಶ್ವನಾಥ್ ಎ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ:-

ಆರೋಪಿಯಾದ ನೀವು ಪಿರ್ಯಾದುದಾರರನ್ನು ದಿನಾಂಕ 10.01.2024 ರಂದು ಸಂಪರ್ಕಿಸಿ, ಸೆಕೆಂಡ್ ಹ್ಯಾಂಡ್ ವಾಹನವನ್ನು ಖರೀದಿಸಲು ತುರ್ತು ಹಣದ ಅವಶ್ಯಕತೆಗಳಿಗಾಗಿ ಅವರಿಂದ ದಿನಾಂಕ 28.03.2024 ರಂದು 1,50,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ಸದರಿ ಹಣದ ಮರುಪಾವತಿಗಾಗಿ ನಿಮ್ಮ ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮೂಡಿಗೆರೆ ಶಾಖೆಯ ಚೆಕ್ ಸಂಖ್ಯೆ 014329, ದಿನಾಂಕ 28.03.2024, ರೂ.1,50,000/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಫಿರ್ಯಾದಿಯು ಸದರಿ ಬ್ಯಾಂಕ್ ನಲ್ಲಿ ಜಮೆಗಾಗಿ ಸಲ್ಲಿಸಿದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ (Funds Insufficient) ಎಂದು ಹಿಂಬರಹ ನೀಡಿರುತ್ತಾರೆ. ಕಾರಣ, ಫಿರ್ಯಾದಿಯು ದಿನಾಂಕ 05.04.2024 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು ತಿಳಿಸಿದರೂ ಸಹ ನೀವು ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ ರೀತ್ಯಾ ನೀವು ನೆಗೋಷಿಬಲ್

ಇನ್ಸ್ಟ್ರುಮೆಂಟ್ ಆಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರಃ

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ

(ದಿನಾಂಕ 02.12.2024 ರಂದು ಆಪಾದನೆಯ ಸಾರಾಂಶವನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

**Sd/-**

ಮೂಡಿಗೆರೆ
ದಿನಾಂಕಃ 02.12.2024

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಮೂಡಿಗೆರೆ.